ಓ.ಎಸ್. ನಂ. *53/2016*

ಡಿ.ಡಬ್ಲು-*1*

ಸಾಕ್ಷಿಯನ್ನು ಇಂದು ದಿನಾಂಕಃ *30.07.2024* ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದ**

ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ಸಾಗುವಳಿ ಮಾಡಲು ಭೂಮಿ ನನಗೆ ಇರುತ್ತದೆ. ಈಗ ಸದರಿ ಯಾರು ಬಿತ್ತು ಬೆಳೆ ಮಾಡುತ್ತಾರೆ ಎಂದರೆ ಸಾಕ್ಷಿ ಬೀಳಾ ಬಿದ್ದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನಗೆ ನನ್ನ ಅಜ್ಜನಿಂದ ಬಂದಿರುತ್ತದೆ. ಸದರಿ ಜಮೀನು ಸ.ನಂ. ನನಗೆ ಹೇಳಲು ಬರುವುದಿಲ್ಲ, ಆದರೆ ಅದರ ಕ್ಷೇತ್ರ 1 ಎ-01 ಗುಂಟೆ ಇರುತ್ತದೆ. ಸದರಿ ಜಮೀನು ಈಗ ಯಾರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನನ್ನ ಅಜ್ಜನಾದ ದ್ಯಾವಪ್ಪನ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಾನು ಗೌಂಡಿಗಳ ಕೈಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಸಹೋದರನ ಹೆಸರು ಲಕ್ಷ್ಮಣ ಇರುತ್ತದೆ ಅವನು ಗುಲಬರ್ಗಾದಲ್ಲಿರುವ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ನಾನು ಗುಲಬರ್ಗಾದಲ್ಲಿ ಗೌಂಡಿ ಕೆಲಸ ಮಾಡುವುದಿಲ್ಲ, ಊರಲ್ಲೇ ಮಾಡುತ್ತೇನೆ. ನನ್ನ ಊರು ನರೋಣಾ ಇರುತ್ತದೆ. ನಾನು ಹುಟ್ಟಿನಿಂದ ಗುಲಬರ್ಗಾದಲ್ಲಿಯೇ ಇರುತ್ತೇನೆ, ಅಲ್ಲಿಯೇ ಕೆಲಸ ಮಾಡುತ್ತಾನೆ ಎಂಧರೆ ಸರಿ ಅಲ್ಲ. ನಾನು ನ್ಯಾಯಾಲಯಕ್ಕೆ ಆಧಾರ ಕಾರ್ಡನ್ನು ಸಲ್ಲಿಸಿರುತ್ತೇನೆ. ನರೋಣಾದಲ್ಲಿರುವ ರೇಷನ ಕಾರ್ಡ ಇರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಗುಲಬರ್ಗಾದಲ್ಲಿರುವ ರೇಶನ ಕಾರ್ಡ ಇರುತ್ತದೆಯಾ ಎಂಧರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಚುನಾವಣೆಯಲ್ಲಿ ಮತ ಚಲಾವಣೆ ಗುಲಬರ್ಗಾದಲ್ಲಿ ಮಾಡುತ್ತೇನೆ ಎಂಧರೆ ಸರಿ. ನಾನು ನನ್ನ ಸಹೋದರ ಲಕ್ಷ್ಮಣ ಹುಟ್ಟತಾ ಗುಲಬರ್ಗಾದಲ್ಲಿಯೇ ಹುಟ್ಟಿ ಗುಲಬರ್ಗಾದಲ್ಲಿಯೇ ಬೆಳೆದಿರುತ್ತೇವೆ ಎಂದರೆ ಸರಿ ಅಲ್ಲ, ನರೋಣಾದಲ್ಲಿ ಹುಟ್ಟಿ ಬೆಳೆದಿರುತ್ತೇವೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನಂ. ೩ ನನ್ನ ಮಾವನಾಗಬೇಕು, ಪ್ರತಿವಾದಿ ನಂ. ೪ ನನ್ನ ಮಾವನ ಹೆಂಡತಿ, ೫ ಮತ್ತು ೬ ಅವರ ಮಕ್ಕಳು ಇರುತ್ತಾರೆ. ನನ್ನ ತಾಯಿ ಸುಮಾರು 20-25 ವರ್ಷಗಳ ಹಿಂದೆ ನರೋಣಾ ಗ್ರಾಮದಲ್ಲಿ ಮೃತರಾಗಿರುತ್ತಾರೆ. ನನ್ನ ತಾಯಿಯ ಹೆಸರು ಫುಲಾಬಾಯಿ ಇರುತ್ತದೆ. ನನ್ನ ತಂದೆಯವರು ಸುಮಾರು 15 ವರ್ಷಗಳ ಹಿಂದೆ ಗುಲಬರ್ಗಾದಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತಾಯಿಯವರ ಮರಣ ಪ್ರಮಾಣ ಪತ್ರ ಇರುತ್ತವೆ. ನನ್ನ ವಕೀಲರಿಗೆ ಸದರಿ ನನ್ನ ತಂದೆ ತಾಯಿಯವರ ಮರಣ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನಾವು ನರೋಣಾ ಗ್ರಾಮದವರು ಅಲ್ಲ, ಪ್ರತಿವಾದಿ ನಂ.೩ ನನ್ನ ಮಾವನಾದ ಕಾರಣ ಬಂದು ಹೋಗುವುದು ಮಾಡುತ್ತೇನೆ ಎಂಧರೆ ಸರಿ ಅಲ್ಲ. ನನ್ನ ಅಜ್ಜನ ಹೆಸರಿನಲ್ಲಿ ಕ್ಷೇತ್ರ 1 ಎ-01 ಗುಂಟೆ ಜಮೀನು ನರೋಣಾ ಗ್ರಾಮದಲ್ಲಿ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿ ಅಲ್ಲ. ನಾವು ನರೋಣಾ ಗ್ರಾಮದವರಲ್ಲ, ನರೋಣಾ ಗ್ರಾಮದಲ್ಲಿ ನಮಗೆ ಸಂಬಂಧಿಸಿದ ಆಸ್ತಿ ಹೊಲವಾಗಲಿ ಮನೆಯಾಗಲಿ ಯಾವದೂ ಇಲ್ಲ ಎಂದರೆ ಸರಿ ಅಲ್ಲ. ನನ್ನ ಅಡ್ಡ ಹೆಸರು ಕಿವಡೆ ಇರುತ್ತದೆ. ನನ್ನ ಅಡ್ಡ ಹೆಸರು ಕಿವಡೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನ್ನ ಅಡ್ಡ ಹೆಸರು ಕಿವಡೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನರೋಣಾ ಗ್ರಾಮದಲ್ಲಿರುವ ನನ್ನ ಮನೆಯ ಸಂಖ್ಯೆ ನನಗೆ ನೆನಪಿಲ್ಲ. ನನ್ನ ಮನೆ ನರೋಣಾ ಗ್ರಾಮದ ಕಿವಡೆನವರ ಕೇರಿ ಯಲ್ಲಿ ಬರುತ್ತದೆ. ಸದರಿ ನರೋಣಾ ಗ್ರಾಮದಲ್ಲಿರುವ ಮನೆಯ ಉದ್ದಳತೆ ಪೂ-ಪ:45, ಉ-ದ : 25 ಇರುತ್ತದೆ. ಸದರಿ ಮನೆಯ ಪೂರ್ವ ದಿಕ್ಕಿಗೆ ಚಂದಪ್ಪ ಕಿವಡೆ ಅವರ ಮನೆ, ಪಶ್ಚಿಮಕ್ಕೆ ಭೀಮಶಾ ಕಿವಡೆ ಅವರ ಮನೆ, ದಕ್ಷಿಣಕ್ಕೆ ಅಣ್ಣಪ್ಪ ಕಿವಡೆ ಅವರ ಮನೆ, ಉತ್ತರಕ್ಕೆ ರಸ್ತೆ ಇರುತ್ತದೆ ನಂತರ ಮದಲಿ ಸಂಬಪ್ಪ ಅವರ ಮನೆ ಇರುತ್ತದೆ. ಸದರಿ ಮನೆ ಜಾಗವು ಈಗ ಯಾರ ಹೆಸರಿನಲ್ಲಿರುತ್ತದೆ ಎಂಧರೆ ಸಾಕ್ಷಿ ನನ್ನ ಅಜ್ಜನಾದ ದೇವಪ್ಪನ ಹೆಸರಿನಲ್ಲಿರುತ್ತದೆ. ಸದರಿ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಜಾಗದ ಕಾಗದ ಪತ್ರಗಳನ್ನು ಮತ್ತು ಟ್ಯಾಕ್ಸ ರಸೀದಿಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು ಮೇಲೆ ಹೇಳಿದ ಚೆಕಬಂದಿಯ ಹಾಗೆ ಯಾವುದೇ ಜಾಗವು ಅಸ್ತಿತ್ವದಲ್ಲಿರುವುದಿಲ್ಲ ಎಂಧರೆ ಸರಿ ಅಲ್ಲ.

ನಾನು ಮತ್ತು ನನ್ನ ಸಹೋದರ ಲಕ್ಷ್ಮಣ ಇಬ್ಬರೂ ಮೊಟ್ಟ ಮೊದಲಿಗೆ 2016 ರಲ್ಲಿ ನರೋಣಾ ಗ್ರಾಮಕ್ಕೆ ಬಂದಿರುತ್ತೇವೆ ಎಂದರೆ ಸರಿ ಅಲ್ಲ. ನಾವು ವಾದಿಯ ಜಾಗದಲ್ಲಿ ಜಬರದಸ್ತಿಯಿಂದ ಹೋಗಿ ಇರಬೇಕು ಎಂದು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿ ಅಲ್ಲ. ನನಗೆ ನನ್ನ ಮಾವ, ಮಾವನ ಮಕ್ಕಳು ಸಹ ಕೂಡ ವಾದಿಯ ಜಾಗದಲ್ಲಿ ಜಬರದಸ್ತಿಯಿಂದ ಪಡೆದುಕೊಳ್ಳುವುದಕ್ಕೆ ಸಹಾಯ ಮಾಡಿದರು ಎಂದರೆ ಸರಿ ಅಲ್ಲ. ವಾದಿಯು ನನ್ನ ಮೇಲೆ ಮತ್ತು ಪ್ರತಿವಾದಿ ನಂ. ೨ ರಿಂದ ೬ ರವರ ಮೇಲೆ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 215/2016 ಇತ್ತು ಎಂದರೆ ಸರಿ. ನಮ್ಮ ಹೆಸರಿನಲ್ಲಿರುವ ದಾಖಲಾತಿಗಳನ್ನು ಮತ್ತು ನನ್ನ ಅಜ್ಜನ ಹೆಸರಿನಲ್ಲಿರುವ ದಾಖಲಾತಿಗಳನ್ನು ಕೇಳಿ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ, ಪಂಚಾಯತಿಯವರು ನೀಡಿರುತ್ತಾರೆ, ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರ ಬರೆಯಲು ಮಾಹಿತಿ ಯಾರು ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜನ ಅಜ್ಜ ಯಾರು, ನನ್ನ ಅಜ್ಜನ ಅಪ್ಪ ಯಾರು, ನನ್ನ ಅಜ್ಜಿಯ ಅಪ್ಪ ಯಾರು ಎಂದು ನನಗೆ ಹೇಳಲು ಬರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಆಗ ಹುಟ್ಟಿರುವುದಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂಧರೆ ಸರಿ ಅಲ್ಲ, ಅವರು

ನಮ್ಮ ಅಣ್ಣ ತಮಕಿಯಾಗಬೇಕು. ಅಣ್ಣ ತಮಕಿ ಹೇಗೆ ಎಂಥರೆ ಸಾಕ್ಷಿಯು ನನ್ನ ಅಜ್ಜ ಮತ್ತು ಅವರ ಅಜ್ಜ ಹೀಗೆ ಸಂಬಂಧ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಅಜ್ಜನ ಹೆಸರು ನನಗೆ ನೆನಪಿಲ್ಲ. ನನ್ನ ಅಜ್ಜನ ತಂದೆ ಮತ್ತು ವಾದಿಯ ಅಜ್ಜನ ತಂದೆ ಒಂದೇ ಇರುವುದಿಲ್ಲ, ಬೇರೆ ಬೇರೆ ಇರುತ್ತಾರೆ. ದಾವಾ ಆಸ್ತಿಯ ವಾದಿಯ ಹೆಸರಿನಲ್ಲಿ ಆಗುವ ಪೂರ್ವದಲ್ಲಿ ಅವರ ತಂದೆ ಹೆಸರಿನಲ್ಲಿತ್ತು, ಅವರ ತಂದೆ ತೀರಿಕೊಂಡ ನಂತರ ಅವರ ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನನ್ನ ಅಜ್ಜನವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರಿನಲ್ಲಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ದಾವಾ ಆಸ್ತಿಗಳಲ್ಲಿ ನನ್ನ ಅಜ್ಜನ ಹೆಸರು ಇತ್ತು ಎಂದು ನುಡಿಯುತ್ತಾರೆ. ನನ್ನ ಜಾಗ ಯಾವುದು ಎಂದು ತೋರಿಸಲು ನಾನು ನಕಾಶೆ ಮಾಡಿ ಹಾಕಿರುತ್ತೇನೆ. ನಾನು ನಕಾಶೆ ಮಾಡಿ ಹಾಕಿದ ಹಾಗೆ ನರೋಣಾ ಗ್ರಾಮದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ ಅಲ್ಲ.

2014 ರಲ್ಲಿ ನಾವು ನರೋಣಾ ಪಂಚಾಯತಿಗೆ ದಾವಾ ಆಸ್ತಿಯಲ್ಲಿ ಹೆಸರು ಸೇರಿಸಿ ಎಂದು ಅರ್ಜಿ ಕೊಟ್ಟಿರುತ್ತೇವೆ ಎಂಥರೆ ಸರಿ. ಸದರಿ ಅರ್ಜಿಗೆ ವಾದಿಯು ಆಕ್ಷೇಪಣಾ(ತಕರಾರು) ಅರ್ಜಿಯನ್ನು ಸಲ್ಲಿಸಿದ್ದನು ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ನನ್ನದಾಗಲಿ, ನನ್ನ ಸಹೋದರನದಾಗಲಿ, ನನ್ನ ತಂದೆಯದಾಗಲಿ, ನನ್ನ ಅಜ್ಜನದಾಗಲಿ ಯಾವತ್ತು ಪಂಚಾಯತ ರೆಕಾರ್ಡನಲ್ಲಿ ಬಂದಿರುವುದಿಲ್ಲ ಎಂಥರೆ ಸರಿ ಅಲ್ಲ. ದಾವಾ ಆಸ್ತಿಗೆ ಮತ್ತು ವಾದಿಯ ಕುಟುಂಬಕ್ಕೆ ನಾವು ಯಾವುದೇ ಸಂಬಂಧವಿಲ್ಲ ಎಂದರೆ ಸರಿ ಅಲ್ಲ. ನಾನು ಪ್ರತಿವಾದಿ ನಂ.೨ ರಿಂದ ೬ ರವರು ಸೇರಿಕೊಂಡು ಜಬರದಸ್ತಿಯಿಂದ ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂಥರೆ ಸರಿ ಅಲ್ಲ. ಉದ್ದೇಶಪೂರ್ವಕವಾಗಿ ನಾವು ದಾವಾ ಆಸ್ತಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.